## ಸಮಗ್ರ ಮಾಹಿತಿ




'ಸುಧಾ' ಮಾ.20ರ ಮುಖಪುಟ ಲೇಖನ ಪ್ರವೀಣ ಕುಲಕರ್ಣಿ ಅವರ ಲೇಖನ 'ವಿಲಾಸಿ ಕಾರುಗಳ ಕಾರುಬಾರು' ಸಮಗ್ರ ಮಾಹಿತಿ ನೀಡಿತು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎಂ.ಜಿ.ರಾಮಚಂದ್ರ, ಮಂಡಗಳಲೆ

## ನಮ್ಮ ಕಾರೇ ನಮಗೆ ವಾಸಿ

ವಿದೇಶಿ ಕಾರುಗಳ ಮಾಹಿತಿ ಚೆನ್ನಾಗಿದೆ. ಆದರೆ ನಮ್ಮಂತಹ ಮಧ್ಯಮ ವರ್ಗದವರಿಗೆ ನಮ್ಮದೇ ತಯಾರಿಕೆಯ ಕಡಿಮೆ ಬೆಲೆಯ ಮಾರುತಿ, ಆಲ್ಟೊ ಮೇಲು ಎನಿಸಿತು.

-ಹೇಮಾ ಸುಬ್ರಹ್ಮಣ್ಯ, ಹಾಲ್ಮತ್ತೂರು

## ಮಲ್ಲಿಗೆ ಆಹಾ ಎಂಥ ಸುಗಂಧ

'ಮಲ್ಲಿಗೆಯೆಂಬ ನಿರಾಭರಣೆ' ವೈನತೇಯರ ವಿಚಾರ ಲಹರಿ ಸುಮಧುರ, ಸುಗಂಧಲೇಪಿತವಾಗಿತ್ತು. ಇಂತಹ ಸುಂದರ ಬರಹ ಬೇರೆ ಯಾವ ಪತ್ರಿಕೆಯಲ್ಲೂ ನಾ ಕಾಣೆ.

– ಕೆ.ಎಂ.ಮಧ್ವರಾಯ, ಬೆಂಗಳೂರು/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

## ಬೇಡವೇ ಬೇಡ ರಂಗಿನಾಟ!

ಕೃತಕ ಬಣ್ಣಗಳಿಂದ ಅನಾಹುತ, ನೈಸರ್ಗಿಕವೇ ಉತ್ತಮ ಎಂಬುದನ್ನು ಉಮಾ ವೇಣೂರರ 'ಬೇಡ ಕೃತಕ ರಂಗಿನಾಟ' ಲೇಖನ ತಿಳಿಸಿಕೊಟ್ಟಿತು.

-ವಿ.ಎಸ್.ಉಮಾ, ಸೋಮವಾರಪೇಟೆ/ ರವೀಂದ್ರನಾಥ ಶಿ.ಯಡಹಳ್ಳಿ, ಬೀಳಗಿ

## ಹೊಸ ಮಾಹಿತಿ

ಡಾ.ವಸುಂಧರಾ ಭೂಪತಿ ಅವರ 'ಖಿನ್ನತೆಗೆ ಔಷಧಿ ಮೀನಿನ ತೈಲ' ಆರೋಗ್ಯ ಭಾಗ್ಯ ಬಯಸುವವರಿಗೆ ಹೊಸ ಮಾಹಿತಿ ತಿಳಿಸಿಕೊಟ್ಟಿತು.

ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ

## ಬೇಕಿಲ್ಲ ಸ್ಕೂಲ್ ಹೋಮ್‌ವರ್ಕ್

'ಸ್ಕೂಲ್ ಹೋಮ್‌ವರ್ಕ್ ಬೇಕೆ?' ಬಿ.ಎನ್. ರಾಮಚಂದ್ರರ ಲೇಖನ ಶಿಕ್ಷಣದ ಬಗ್ಗೆ ಉತ್ತಮ ಮಾಹಿತಿ ನೀಡಿತು.

-ಪಾಪಿ ಜೈನ್, ಉಜಿರೆ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಎಂ.ಸರೋಜ, ಗೊರ್ಲಡಕು

## ಭ್ರಷ್ಟತೆಗೆ ಕನ್ನಡಿ ಹಿಡಿದ ಕಥೆ

ಬಾ.ಮ.ಬಸವರಾಜಯ್ಯರ 'ಛೇರ್ಮನ್ ಚೋಕ್ಲಾ ನಾಯ್ಕ' ಕಥೆ ಇಂದಿನ ಭ್ರಷ್ಟ ರಾಜಕಾರಣಕ್ಕೆ ಕನ್ನಡಿ ಹಿಡಿದ ನೈಜ ಕಥೆಯಾಗಿತ್ತು. ದಾವಣಗೆರೆ ದಕ್ಷಿಣ ಭಾಗದ ಆಡುಭಾಷೆ ಹಿತವಾಗಿತ್ತು.

-ಕೆ.ಸಿ.ಸತ್ಯನಾರಾಯಣ, ದೊಡ್ಡ ಬಳ್ಳಾಪುರ/ ಎಸ್.ಪರಮೇಶ್ವರಪ್ಪ, ದಾವಣಗೆರೆ

## 'ಸಿಂಹ'ದಂತಹ ನಟ

ಸಿ.ಆರ್.ಸಿಂಹ ಮೂಲತಃ ಒಬ್ಬ ನಟ, ಕನ್ನಡದ ದೊಡ್ಡ ನಟರ ಸಾಲಿನಲ್ಲಿ ನಿಂತವರು ಎಂಬುದನ್ನು ಗುಡಿಹಳ್ಳಿ ನಾಗರಾಜರ ಬರಹ ವಿಶ್ಲೇಷಿಸಿತ್ತು.

ಕೊಹಿಮ, ಬಸರಕೋಡು/ ಸುಂದರ್, ಬೆಂಗಳೂರು

## ಇಡ್ಲಿ, ದೋಸೆ, ಬೇಸಾಯ

'ಎಳೆಯರ ಅಂಗಳ'ದಲ್ಲಿ 'ವಿವೇಕಾನಂದರು ಮತ್ತು ಮಗು' ಎಂಬ ಸುಶೀಲಾ ಸೋಮಶೇಖರ್ ಪದ್ಯ, ಚಿತ್ರ ಚೆನ್ನಾಗಿತ್ತು. ಕೆ.ಶ್ರೀನಿವಾಸರಾವ್ ಅವರ 'ಇಡ್ಲಿ ದೋಸೆ ಚಟ್ನಿ ಕಥೆ!' ತಮಾಷೆಯಾಗಿತ್ತು.

ಗಾದೆಗಳಲ್ಲಿ 'ಬೇಸಾಯ, ನೀಸಾಯ, ಮನೆಮಂದಿಯೆಲ್ಲಾ ಸಾಯ'ಎಂಬುದು ತಮಾಷೆಗೆ ಹೇಳುವ ಮಾತು. ಆದರೆ ಅದು 'ಬೇಸಾಯ, ನಿನಗೆ ಸಹಾಯ, ನನಗೆ ಸಹಾಯ, ಮನೆಮಂದಿಗೆಲ್ಲ ಸಹಾಯ' ಎಂಬುದೇ ಸರಿ.

-ಎಸ್.ಕೆ.ಗೀತಾ, ಹಾಸನ/ ರೇಣುಕಾ ಪಾಟೀಲ, ದಾವಣಗೆರೆ

## ನ್ಯೂಯಾರ್ಕ್ ಅಲ್ಲ, ವಾಶಿಂಗ್‌ಟನ್

ಲೈಬ್ರರಿ ಆಫ್ ಕಾಂಗ್ರೆಸ್ ಬಗ್ಗೆ ಮಾ.13ರ 'ಪದಬಂಧ' ಪುಟದಲ್ಲಿ ಎನ್. ವಾಸುದೇವ್ ಉತ್ತಮ ಅಂಕಿ ಅಂಶಗಳನ್ನು ನೀಡಿದ್ದಾರೆ. ಆದರೆ ಅದು ನ್ಯೂಯಾರ್ಕ್‌ನಲ್ಲಿದೆ ಎಂದು ನಮೂದಿಸಿದ್ದಾರೆ. ಅದು ತಪ್ಪು. ಅದು ಅಮೆರಿಕಾದ ರಾಷ್ಟ್ರೀಯ ಗ್ರಂಥಾಲಯ ಲೈಬ್ರರಿ ಆಫ್ ಕಾಂಗ್ರೆಸ್– ವಾಶಿಂಗ್‌ಟನ್ ಡಿ.ಸಿ.ಯಲ್ಲಿ ಇದೆ.

-ಜಿ.ಬಿ. ಹೊಂಬಳ, ಧಾರವಾಡ

Authentic Ayurveda

Kerala's Ashtavaidya tradition in its real purity brought to you by Vaidyaratnam



- Ayurveda consultation for all types of medical illnesses, advice for correction of life style and diet habits to support good health
- Best quality Ayurveda medicines from Vaidyaratnam
- Ayurveda Therapies and Panchakarma through Kerala's Ashtavaidya Tradition
- Health and beauty maintaining Ayurveda treatments

VAIDYARATNAM Health Care
Devoted to authentic Ayurveda

No.2281/B,14th A Main, H.A.L. 2nd Stage, Indira Nagar, Bangalore 560 008
**Ph:+91 80 41507333**
email: info@vaidyaratnamhealthcare.com
web: vaidyaratnamhealthcare.com

Prior appointment required for doctor consultation and therapies

**Our Parental Institutions: Vaidyaratnam Treatment Center** #2335, 17th Cross, 24th Main, Sector- 1, HSR Layout, Bangalore- 560102. Ph:22580020 **Vaidyaratnam Oushadhasala [P] Ltd.** # 92/1, 8th & 10th Cross, Temple Road, Malleshwaram, Bangalore. Ph:41104359